Volume: 4 Issue: 1 Pages: 01-06




# ಭಾರತೀಯ ಹಾಗೂ ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯಲ್ಲಿ ರೀತಿ, ಮಾರ್ಗ, ಶೈಲಿ, ಶಯ್ಯೆ ಪಾಕ, ವೃತ್ತಿ,ಪ್ರವೃತ್ತಿ ಪರಿಕಲ್ಪನೆಗಳ ತೌಲನಿಕ ವಿಮರ್ಶೆ

*1 **Mallappa**

*1 Assistant Professor, Govt First Grade College, Keruru, Ta. Badami. G. Bagalkota, Karnataka, India.

**Article Info.**
**E-ISSN:** 2583-6528
**Impact Factor (SJIF):** 6.876
**Peer Reviewed Journal**
**Available online:** www.alladvancejournal.com

**Received:** 05/Dec/2024
**Accepted:** 01/Jan/2025

***Corresponding Author**
**Mallappa**
Assistant Professor, Govt First Grade College, Keruru, Ta. Badami. G. Bagalkota, Karnataka, India.

**Abstract**
ರೀತಿ ಪ್ರಸ್ಥಾನದವರು ಕಾವ್ಯರಹಸ್ಯವನ್ನು ತಿಳಿಯುವಲ್ಲಿ ಅಲಂಕಾರ ಪ್ರಸ್ಥಾನದವರಿಗಿಂತ ಮುಂದುವರಿದರಾದರೂ ಅವರ ಪರಿಕರಗಳೂ ಸೀಮಿತವಾಗಿದ್ದವು. ವೇಷವಿನ್ಯಾಸಕ್ರಮವು ಪ್ರವೃತ್ತಿ: ವಿಲಾಸವಿನ್ಯಾಸಕ್ರಮ ವೃತ್ತಿ; ವಚನ ವಿನ್ಯಾಸಕ್ರಮ ರೀತಿ.“ಭಗವಂತನ ಹೆಜ್ಜೆಗಳು ಭೂಮಿಗೆ 'ಅತಿಭಾರ' ಆದುದಕ್ಕೆ 'ಭಾರತೀ' ಎಂದೂ ಕೇಶಪಾಶ ಕಟ್ಟಿದ್ದಕ್ಕೆ 'ಕೈಶಿಕೀ' ಎಂದೂ ಗುರಿತಪ್ಪದ ಸತ್ವಶಾಲಿ ಬಾಣಗಳನ್ನು ಬಿಟ್ಟಿದ್ದಕ್ಕೆ ಸಾತ್ವತೀ ಎಂದೂ ಚಿತ್ರವಿಚಿತ್ರ ಹೋರಾಟದ ಫಲಕ್ಕೆ ಆರಭಟೀ ಎಂದೂ ಭರತ ಹೇಳಿದ್ದಾನೆ.ಸ್ಟೈಲ್ ಎಂದರೆ ಉಡುಗೆಯಲ್ಲ; ಅದು ದೇಹದ ರಕ್ತಮಾಂಸಗಳಿದ್ದಂತೆ ಎಂಬ ಮಿಥ್ಲೆಟನ್ ಮುರೆಯ ಮಾತಿನಲ್ಲಿ ಸಾವಯವ ಸಂಬಂಧವೇ ಶೈಲಿಯೆಂಬ ಮಾತಿನ ಸಮರ್ಥನೆಯಿದೆ.ಅಲಂಕಾರ ಶಾಸ್ತ್ರದಲ್ಲಿ ಪಾಕ'ವೆಂಬ ಮತ್ತೊಂದು ವಿಶಿಷ್ಟ ಪದದ ಉಪಯೋಗ ಬಹುಕಡೆ ಕಂಡುಬರುತ್ತದೆ. ವಾಮನನು ಅದನ್ನು ಪದಗಳ ಪರಿವೃತ್ತಿ ಇಲ್ಲದುದು ಪಾಕವೆಂದು ಹೇಳುತ್ತಾನೆ. ಆಲಂಕಾರಿಕರು ಹಲವು ಬಗೆಯ ಪ್ರಕಾರದ ಪಾಕಗಳನ್ನು ತಿಳಿಸುವರು. ಅವುಗಳಲ್ಲಿ ಮುಖ್ಯವಾದವು, ನಾರೀಕೇಳಪಾಕ, ಕ್ರಮುಕಪಾಕ, ಕದಳೀಪಾಕ, ಮೃದ್ವೀಕ ಮೊದಲಾದವು.

**Keywords:** ಭಾ.ಕಾ.ಮೀ- ಭಾರತೀಯ ಕಾವ್ಯ ಮೀಮಾಂಸೆ., ಕೇ.ವೃ:- ಕೇಶಕಿ ವೃತ್ತಿ, ಅ.ಸುಂ:- ಅವಂತಿ ಸುಂದರಿ, ಶಾಂ.ರ:-ಶಾಂತರಸ, ನಾ.ಕೇ:-ನಾರಿಕೇಳ ಪಾಕ

## Introduction

**ರೀತಿಪಂಥ.:-** ಕಾವ್ಯಮೀಮಾಂಸೆಯ ಪ್ರಧಾನ ಪರಿಕಲ್ಪನೆಗಳಲ್ಲಿ ರೀತಿಯೂ ಒಂದು. ಕಾವ್ಯಮೀಮಾಂಸಕರ ಒಂದು ಪಂಥವು ಕಾವ್ಯದಲ್ಲಿ ರೀತಿಯೇ ಮುಖ್ಯವೆಂದು ವಾದಿಸಿದೆ. ಈ ಪಂಥವನ್ನು ರೀತಿ ಪ್ರಸ್ಥಾನವಂಬ ಹೆಸರಿನಲ್ಲಿ ಗುರುತಿಸುವುದು ವಾಡಿಕೆಯಾಗಿದೆ. ದಂಡಿಯು ರೀತಿ ಪ್ರಸ್ಥಾನಕ್ಕೆ ಬೇಕಾದ ಹಿನ್ನೆಲೆಯನ್ನು ಒದಗಿಸಿದನೆನ್ನಬಹುದು. ಆತನ ಮಾರ್ಗ ಪರಿಕಲ್ಪನೆಯು ಬೇರೆ ಬೇರೆ ಅರ್ಥವ್ಯಾಪ್ತಿಯನ್ನು ಪಡೆಯುತ್ತಾ ಬಂದಿತಾದರೂ ರೀತಿಯ ಗುಣಾಶ್ರಯವನ್ನುಳ್ಳ ವಿಶಿಷ್ಟ ಪದರಚನೆ ಎಂಬುದು ಮಾತ್ರ ರೀತಿಪ್ರಸ್ಥಾನದ ಪ್ರಧಾನ ನಿಲುವಾಯಿತು. ಈ ಪ್ರಸ್ಥಾನದ ಅತ್ಯಂತ ಪ್ರಮುಖ ವಕ್ತಾರನೆಂದರೆ ವಾಮನ. ಆತನು ರೀತಿಯು ಕಾವ್ಯದ ಆತ್ಮವೆಂದು ವಾದಿಸಿದನು. ರೀತಿ ಪ್ರಸ್ಥಾನದವರು ಕಾವ್ಯರಹಸ್ಯವನ್ನು ತಿಳಿಯುವಲ್ಲಿ ಅಲಂಕಾರ ಪ್ರಸ್ಥಾನದವರಿಗಿಂತ ಮುಂದುವರಿದರಾದರೂ ಅವರ ಪರಿಕರಗಳೂ ಸೀಮಿತವಾಗಿದ್ದವು. ಆ ಕಾರಣದಿಂದಲೇ ಧ್ವನಿಪ್ರಸ್ಥಾನದ ಬೆಳವಣಿಗೆಯೊಡನೆ ರೀತಿಯ ಪರಕಲ್ಪನೆ ಗೌಣಸ್ಥಾನ ಪಡೆಯಿತು.

ವಾಮನನು ಈ ಪಂಥದ ಅಧ್ವರ್ಯು. ಅವನು ದಂಡಿಯ ಗುಣಗಳನ್ನು ಒಪ್ಪಿ ಅವೇ ಹತ್ತು ಶಬ್ದಗುಣಗಳೆಂದೂ ಅರ್ಥಗುಣಗಳೆಂದೂ ಸ್ವೀಕರಿಸಿದ್ದಾನೆ.

ದಂಡಿಯು ವೈದರ್ಭಿ, ಗೌಡೀ ಎಂದು ಎರಡು ಮಾರ್ಗಗಳನ್ನು ಹೇಳಿ ಅವುಗಳಿಗೆ ಹೊಂದಿಕೊಂಡಿರುವ ಗುಣಗಳನ್ನು ವಿವರಿಸುವುದು ಸರಿಯಷ್ಟೆ.

“ರೀತಿ'ಯನ್ನು ವ್ಯವಸ್ಥಿತವಾಗಿ ವಿವರಿಸಿ ಅದನ್ನು ಕಾವ್ಯದ ಆತ್ಮವೆಂದು ಕರೆದವನು ವಾಮನ. ಅವನು ವ್ಯವಸ್ಥಿತವಾಗಿ ರೀತಿ ಎಂದರೆ 'ವಿಶಿಷ್ಟಪದರಚನೆ'. ರೀತಿಯು ಗುಣಾಶ್ರಯಿ. ಇವೆರಡೂ ನೆಲೆಗಳು ರೀತಿಯ ವ್ಯಾಪ್ತಿಯನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ.”

'ರೀತಿ'ಯು ವಿಶಿಷ್ಟವಾದ ಪದರಚನೆಯಾದ್ದರಿಂದ, ಪದಗಳ ಸಂಘಟನೆಯನ್ನು ನಿಯಂತ್ರಿಸುವ, ನಿರ್ದೇಶಿಸುವ ತತ್ತ್ವವಾವುದೆಂಬ ಪ್ರಶ್ನೆಯೇಳುತ್ತದೆ; ಅದೇ ಗುಣ.
ರೀತಿಯ ವ್ಯಾಖ್ಯೆಗಳು:-ವಚನವಿನ್ಯಾಸಕ್ರಮೋ ರೀತಿಃ'- ಕಾವ್ಯಮಿಮಾಂಸಾ"(ರಾಜಶೇಖರ)
'ವೈದರ್ಭಾದಿಕೃತಃ ಪಂಥಾಃ ಕಾವ್ಯೇ ಮಾರ್ಗ:-ಸರಸ್ವತಿ ಕಂಠಾಭರಣ(ಭೋಜ)
**'ಪದಸಂಘಟನಾರೀತಿಃ'-**
ಸಾಹಿತ್ಯದರ್ಪಣ(,ವಿಶ್ವನಾಥ)ಪ್ರತಾಪರುದ್ರೀಯ.
**ನಾಗವರ್ಮ:-** "ರೀತಿ ಕೃತಿಗೊಪ್ಪುವ ಮೆಯ್" (ಕಾವ್ಯಾವಲೋಕನ)

**ಸಮವಾಯ:-** ರೀತಿಗೂ ಗುಣಕ್ಕೂ ಅಂತರಂಗದ ಸಂಬಂಧ. ಅದನ್ನು 'ಸಮವಾಯ'ವೆನ್ನಲಾಗಿದೆ. 'ಸಂಯೋಗ';-ರೀತಿಗೂ ಅಲಂಕಾರಕ್ಕೂ ಇರುವ ಸಂಬಂಧ ಬಹಿರಂಗದ್ದು. ಅದನ್ನು 'ಸಂಯೋಗ'ವೆನ್ನಲಾಗಿದೆ.
ವಾಮನನಲ್ಲಿ ರೀತಿಯೆಂಬ ಪದವು ಭಾವೋಚಿತವಾದ ಪದರಚನೆಯೆಂಬ ಅರ್ಥವನ್ನು ಪಡೆಯಿತೆಂದು ಸ್ಥೂಲವಾಗಿ ಹೇಳಬಹುದು. ಒಂದು ವರ್ಣನೆಯ ಸಂದರ್ಭದಲ್ಲಿ ಯಾವ ಭಾವವಿದೆಯೋ, ಅದರ ಸ್ವರೂಪವನ್ನು ಬಹಿರಂಗೊಳಿಸುವ ಹಾಗೆ ಕವಿಯ ಪದಗಳನ್ನು ಸಂಘಟಿಸಬೇಕೆಂದನು. ದಂಡಿಯ ವೇಳೆಗೆ ರೀತಿಯು ಮಾರ್ಗವೆಂಬ ಹೆಸರಿನಲ್ಲಿ ಪ್ರದೇಶನಿಷ್ಠವಾದ ಪರಿಕಲ್ಪನೆಯಾಗಿತ್ತು. ವೈದರ್ಭಿಯು ವಿದರ್ಭದೇಶದಲ್ಲಿ, ಗೌಡವು ಗೌಡದೇಶದಲ್ಲಿ ಪ್ರಚುರದಲ್ಲಿದ್ದ ಕಾವ್ಯರಚನಾಶೈಲಿಯೆಂದೂ, ಭಾಷಾ ವೈಶಿಷ್ಟ್ಯಗಳ ಮೊತ್ತವೆಂತಲೂ ಹೇಳಬಹುದು. ಆದರೆ ವಾಮನನು ಪ್ರದೇಶನಿಷ್ಠತೆಯಿಂದ ಸಂದರ್ಭನಿಷ್ಠತೆಯ ಕಡೆಗೆ ರೀತಿಯನ್ನು ನಡೆಸಿದನು.
ಈ ಪರಿಕಲ್ಪನೆ ಕುಂತಕನಲ್ಲಿ ಮತ್ತೊಂದು ರೂಪವನ್ನು ಪಡೆಯುತ್ತದೆ. ಆತ ಮತ್ತೆ 'ಮಾರ್ಗ'ವೆಂಬ ಮಾತನ್ನೇ ಬಳಸುತ್ತಾನೆ. ಅವನ ಪ್ರಕಾರ ರೀತಿಯು ಕವಿ ಸ್ವಭಾವಾನುಸಾರಿಯಾದುದು. ರೀತಿಯು ಕವಿಯ ಅಂತರಂಗದ ಗುಣಗಳ ಅಭಿವ್ಯಕ್ತಿ. ಪಾಶ್ಚಾತ್ಯ ಕಾವ್ಯ ವಿಮರ್ಶೆಯಲ್ಲಿ ಸ್ಟೈಲ್ ಅನ್ನು 'ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿ' ಎಂದದ್ದು ಆಶ್ಚರ್ಯಕರವಾದ ಬಗೆಯಲ್ಲಿ ಕುಂತಕನ ಅಭಿಪ್ರಾಯವನ್ನು ಹೋಲುತ್ತದೆ.
**ರೀತಿಯ ಬೆಳವಣಿಗೆ:** ಪ್ರದೇಶನಿಷ್ಠತೆಯಿಂದ (ಭರತ,ಭಾಮಹ,ದಂಡಿ)ಸಂದರ್ಭನಿಷ್ಠತೆಯ(ವಾಮನ) ಕಡೆಗೆ ಅಲ್ಲಿಂದ ಕವಿ ಸ್ವಭಾವನಿಷ್ಠತೆಯ(ಕುಂತಕ) ಕಡೆಗೆ ಬೆಳೆದು ಬಂದದ್ದು ರೀತಿಯ ಬೆಳವಣಿಗೆಯ ಸಂಕ್ಷಿಪ್ತರೂಪ.
ಮಾರ್ಗವನ್ನು ವಾಮನನು ರೀತಿಯೆಂದು ಕರೆದಿದ್ದಾನೆ. ಅವನು: ರೀತಿಯು ಕಾವ್ಯದ ಆತ್ಮ ಅದು ವಿಶಿಷ್ಟ ಪದರಚನೆ. ಗುಣಗಳು ಅದರ ವಿಶೇಷ ಎಂದು ಹೇಳಿರುವುದು ಮಹತ್ವದ ಸಂಗತಿ. ಅವನು ವೈದರ್ಭಿ ರೀತಿಯಲ್ಲಿ ಎಲ್ಲ ಹತ್ತು ಗುಣಗಳು, ಗೌಡಿಯಲ್ಲಿ ಓಜಸ್ಸು ಮತ್ತು ಕಾಂತಿ: ಪಾಂಚಾಲಿಯಲ್ಲಿ ಮಾಧುರ್ಯ ಮತ್ತು ಸೌಕುಮಾರ್ಯಗಳೆಂಬ ಗುಣಗಳು ಇರುತ್ತವೆಂದು ತಿಳಿಸುತ್ತಾನೆ. ರೀತಿಗಳಿಗೆ ಗೌಡೀ, ವೈದರ್ಭಿ, ಪಾಂಚಾಲೀ ಎಂಬ ಹೆಸರು ಬರಲು ಕಾರಣವನ್ನು ವಿದರ್ಭ, ಗೌಡ, ಪಾಂಚಾಲ ದೇಶದ ಕವಿಗಳಲ್ಲಿ ಕಂಡುಬರುವ ಶಬ್ದ ರಚನೆಯ ಸ್ವರೂಪದಿಂದ ರೀತಿಗಳಿಗೆ ಆಯಾ ದೇಶಗಳ ಹೆಸರು ಬಂದಿವೆಯೆಂದು ಅವನ ಅಭಿಪ್ರಾಯ. ಇದು ಸರ್ವಮಾನ್ಯವಾಗಿದೆ. ಮುಂದೆ, ದೇಶದ ಸಂಬಂಧವಾಗಿ ಬಂದ ಹೆಸರು ಹೋಗಿ ಕಾವ್ಯಗಳಲ್ಲಿ ಕಂಡು ಬರುವ ವಿಶಿಷ್ಟ ರೀತಿಯ ಪ್ರಯೋಗಗಳಿಗೆ ಈ ಹೆಸರು ಉಪಯೋಗವಾಗಲು ಆರಂಭವಾಯಿತು. ದಂಡಿ, ಭರತ, ವಾಮನರು ಹೇಳುವ ರೀತಿಗನುಸರಿಸಿದ ಗುಣಗಳ ಲಕ್ಷಣಗಳಲ್ಲಿ ಭೇದವಿರುವುದು ಸರಿ.

ರೀತಿಯ ಸಂಖ್ಯೆ:-ರೀತಿ ಮತ್ತು ವೃತ್ತಿಗಳ ಸಂಖ್ಯೆ, ಉಪಯೋಗ, ವಿವರಣೆಗಳಲ್ಲಿ ಲಾಕ್ಷಣಿಕರಲ್ಲಿ ಒಮ್ಮತವಿಲ್ಲ.
**ನಾಟ್ಯಶಾಸ್ತ್ರ:-** ಆವಂತೀ, ದಾಕ್ಷಿಣಾತ್ಯ, ಪಾಂಚಾಲೀ, ಔಡ್ರಮಾಗಧಿ ಎಂಬ ನಾಲ್ಕು ಪ್ರವೃತ್ತಿಗಳನ್ನು ಹೇಳಿ ಅವು ಆಯಾ ದೇಶಗಳ ವೇಷಭಾಷೆಗಳನ್ನು ಅವಲಂಬಿಸಿವೆಯೆಂದು ತಿಳಿಸುತ್ತಾನೆ.
**ಭರತ:-**ರೀತಿಗಳನ್ನು ವೃತ್ತಿಗಳೆಂದು ಸಮಾನಾರ್ಥದಲ್ಲಿ ಭರತನು ಉಪಯೋಗಿಸಿದ್ದಾನೆ. ನಾಟ್ಯಶಾಸ್ತ್ರದಲ್ಲಿ ಭಾರತೀ, ಸಾತ್ವತೀ, ಕೈಶಿಕೀ ಮತ್ತು ಆರಭಟೀ ಎಂಬ ನಾಲ್ಕು ವೃತ್ತಿಗಳ ವಿವರವಿರುವುದು ಸರಿಯಷ್ಟೆ. ಅಲ್ಲಿ ವೃತ್ತಿ ಮತ್ತು ರೀತಿಗಳ ಸಂಬಂಧ ಯಾವ ರೀತಿ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ವೃತ್ತಿಗಳು ನಾಟ್ಯಮಾತೃಗಳು (ವೃತ್ತಿಯೋ ನಾಟ್ಯಮಾತರಃ) ಎಂದು ಭರತನು ತಿಳಿಸುತ್ತಾನೆ. ಯಾವ ಯಾವ ರಸದಲ್ಲಿ ಅವನು ಉಪಯೋಗಿಸ ಬೇಕೆಂಬುದನ್ನು ವಿವರಿಸುತ್ತಾನೆ. ಶೃಂಗಾರ ಹಾಸ್ಯದಲ್ಲಿ ಕೈಶಿಕೀ; ವೀರ, ರೌದ್ರ, ಅದ್ಭುತಗಳಲ್ಲಿ ಸಾತ್ವತೀ; ಭಯಾನಕ ಬೀಭತ್ಸ ರೌದ್ರಗಳಲ್ಲಿ ಆರಭಟೀ; ಕರುಣ ಮತ್ತು ಅದ್ಭುತಗಳಲ್ಲಿ ಭಾರತೀ ವೃತ್ತಿಗಳನ್ನು ಉಪಯೋಗಿಸಬೇಕೆಂದು ಭರತನ ವಿವಕ್ಷೆಯಾಗಿದೆ.
**ಆನಂದವರ್ಧನ:-**ಔಚಿತ್ಯದಿಂದ ಕೂಡಿದ ಶಬ್ದಾರ್ಥಗಳನ್ನು ರಸಾದಿಗುಣಗಳಿಗನುಗುಣವಾಗಿ ಉಪಯೋಗಿಸುವುದಕ್ಕೆ ವೃತ್ತಿಯನ್ನುವರೆಂದು ಆನಂದವರ್ಧನನು ಅಭಿಪ್ರಾಯ ಪಡುತ್ತಾನೆ. ನಾಟಕದ ಅದರಂತೆಯೇ ಕಾವ್ಯದ ಶರೀರ ಇತಿ ವೃತ್ತ; (ವಸ್ತು) ರಸಾದಿಗಳು ಜೀವ, ಕೈಶಿಕ್ಯಾದಿ ವೃತ್ತಿಗಳು ರಸಾನುಗುಣವಾದ ಔಚಿತ್ಯದಿಂದ ಕೂಡಿ ವಾಚ್ಯಾಶ್ರಯವಾಗಿರುತ್ತವೆ. ಉಪನಾಗರಿಕಾ, ಪರುಷಾ, ಕೋಮಲಾ (ಗ್ರಾಮ್ಯ) ಇವು ವಾಚಕಾಶ್ರಯಗಳು,
ಭಾಮಹನಲ್ಲಿ ವೈದರ್ಭ, ಗೌಡಿಗಳು ಎಂಬ ದೇಶ ವಾಚಕಗಳ ಉಲ್ಲೇಖ ಬರುತ್ತದೆ. ಅದನ್ನಾತ ಗೌಡಿಗಿಂತ ವೈದರ್ಭಿಯೇ ಶ್ರೇಷ್ಠ ಎಂದೂ 'ರೀತಿ'ಯೆಂದು ಕರೆಯದೆ ಕಾವ್ಯಜಾತಿ ಎಂದು ಹೇಳುತ್ತಾನೆ. ಇವನು ರೀತಿಗಳನ್ನು ಅಲಂಕಾರ ಸಂಬಂಧಿಯಾಗಿಸಿದನು.
ದಂಡಿ ಎರಡು ಮಾರ್ಗಗಳನ್ನು ಪ್ರಧಾನವಾಗಿ ಸೂಚಿಸಿ ಅವು ಗುಣಸಮನ್ವಿತವಾದುವುಗಳೆಂದು ಹೇಳುತ್ತಾನೆ. 'ರೀತಿ' ಎಂಬ ಮಾತು ವಾಮನನಿಂದ ಈಚೆಗೆ ಹೆಚ್ಚು ರೂಢವಾಯಿತು. ಇದನ್ನು ದಂಡಿ ಮಾತುಗಳ ಮಾರ್ಗ ಎಂದು ಕರೆಯುತ್ತಾನೆ.
ರೀತಿಗಳನ್ನು ಪ್ರದೇಶ ವಾಚಕವಾಗಿ ಕರೆದಿರುವುದು ಭಾಮಹನಿಗಿಂತ ಮುಂಚಿನ ಕಾಲಘಟ್ಟದಲ್ಲಿ.
ರೀತಿಸಿದ್ಧಾಂತವನ್ನು ಪ್ರತಿಪಾದಿಸಿದವರಲ್ಲಿ ಮೊದಲಿಗ ವಾಮನ, ದಂಡಿ ಗುಣಗಳನ್ನು ರೀತಿಗೆ ಅಥವಾ ಮಾರ್ಗಕ್ಕೆ ಅನ್ವಯಿಸಿ ಹೇಳಿದರೂ ಅದನ್ನೇ ಸ್ವತಂತ್ರವಾಗಿ ಪ್ರತಿಪಾದಿಸಲಿಲ್ಲ. ಆದರೆ ವಾಮನ ರೀತಿ ಮತ್ತು ಗುಣಗಳಿಗೆ ಸ್ಪಷ್ಟವಾದ ಲಕ್ಷಣಗಳನ್ನು ಹೇಳಿ ರೀತಿಯನ್ನು ಸ್ವತಂತ್ರವಾಗಿ ಪ್ರತಿಪಾದಿಸಿದ.
ದಂಡಿಯು ರೀತಿ ಶಬ್ದವನ್ನು ಉಪಯೋಗಿಸಿಲ್ಲ. ಆದರೆ, ಅದೇ ಅರ್ಥದಲ್ಲಿ ಮಾರ್ಗ, ಪದ್ಧತಿ ಮೊದಲಾದವುಗಳನ್ನು ಉಪಯೋಗಿಸಿದ್ದಾನೆ. ಅವನು ಗೌಡೀ ವೈದರ್ಭಿ ಎಂಬ ಎರಡೇ ಮಾರ್ಗಗಳನ್ನು ಮಾತ್ರ ತಿಳಿಸಿದ್ದಾನೆ.
**ದಂಡಿ:-** ರೀತಿಯನ್ನು ಮಾರ್ಗ ಎಂದು ಕರೆದವನು.
ವಾಮನನು ಅದಕ್ಕೆ 'ಪಾಂಚಾಲಿ' ಎಂಬುದನ್ನು ಸೇರಿಸಿ ಮೂರು ರೀತಿಗಳನ್ನು ಹೇಳಿದ್ದಾನೆ;
ವಾಮನನ ಪ್ರಕಾರ ರೀತಿಯ ಲಕ್ಷಣಗಳು:- ರೀತಿಯನ್ನು ಕುರಿತು ಆಲೋಚಿಸಿದ ಅಲಂಕಾರಿಕರು ದಂಡಿ ಭಾಮಹ ವಾಮನ ಮತ್ತು ಕುಂತಕ
**ವಾಮನ:-** ರೀತಿರಾತ್ಮಕಾವ್ಯಸ್ಯ ಎಂಬ ವ್ಯಾಖ್ಯೆಯನ್ನು ಕೊಟ್ಟು,ವಿಶಿಷ್ಟಪದ ರಚನಾವಳಿ ರೀತಿ,ಎಂದು
ವಿಶೇಷೋ ಗುಣಾತ್ಮಾ ಎಂದಿದ್ದಾನೆ.

ಇವನು ಮೂರು ರೀತಿಗಳನ್ನು ಮತ್ತು ಅವುಗಳ ಲಕ್ಷಣಗಳನ್ನು ಹೇಳಿದ್ದಾನೆ.

ಇವನು ಗುಣಗಳನ್ನು ಶಬ್ದಗುಣ ಮತ್ತು ಅರ್ಥಗುಣ ಎಂದು ವಿಭಾಗಿಸಿದನು ಅವುಗಳ ಸಂಖ್ಯೆಯನ್ನು 20ಕ್ಕೆ ಏರಿಸಿದನು.

1. **ವೈದರ್ಭಿ:-** ಸಮಗ್ರ ಗುಣಾ ವೈದರ್ಭಿ
2. **ಗೌಡಿ:-** ಓಜಃ ಕಾಂತಿಮತಿ ಗೌಡಿ ಇವು ಎರಡು ಪರಸ್ಪರ ವಿರುದ್ಧ ಗುಣವುಳ್ಳವುಗಳು.
3. **ಪಾಂಚಾಲಿ:-** ಮಾಧುರ್ಯ ಸೌಕುಮಾರೋಪನ್ನಾ ಪಾಂಚಾಲಿ

**ರುದ್ರಟ:-** ರೀತಿಗಳ ಸಂಖ್ಯೆಗೆ ಲಾಟಿಯಾವನ್ನು ಸೇರಿಸಿದನು.

**ಕುಂತಕ:-** ರೀತಿಗಳನ್ನು ಮನಶಾಸ್ತ್ರಿಯವಾಗಿ ವಿವರಿಸಿದವನು ಅವನ ಪ್ರಕಾರ ರೀತಿಯು ಕವಿ ಸ್ವಭಾವಾನುಸಾರಿ, ರೀತಿಯು ಲೇಖಕನ ವೈಯಕ್ತಿಕ ಹಾಗೂ ಅಂತರಂಗದ ಗುಣಗಳ ಅಭಿವ್ಯಕ್ತಿ ಆಗಿರುತ್ತದೆ ಎಂದನು.

ರುದ್ರಟನು ಈ ಮೂರು ರೀತಿಗಳಿಗೆ ಲಾಟೀಯಾ ಎಂಬುದನ್ನು ಕೂಡಿಸಿ ನಾಲ್ಕು ರೀತಿಗಳನ್ನು ಹೇಳುತ್ತಾನೆ. ಭೋಜನು ಇವುಗಳಿಗೆ 'ಆವಂತೀ' 'ಮಾಗಧೀ' ಎಂದು ಮತ್ತೆರಡು ಕೂಡಿಸಿ ಆರು ರೀತಿಗಳನ್ನು ಹೇಳುತ್ತಾನೆ. ರಾಜಶೇಖರನು ಗೌಡೀ, ಪಾಂಚಾಲೀ, ವೈದರ್ಭಿ ಎಂಬ ಮೂರು ರೀತಿಗಳನ್ನೆ ಹೇಳಿದ್ದರೂ, ಕರ್ಪೂರಮಂಜರಿಯಲ್ಲಿ ವತ್ಸಗುಲ್ಮ, ಮಾಗಧಿ, ಪಾಂಚಾಲೀ ರೀತಿಗಳೆಂದು ಅವುಗಳಿಗೆ ಹೆಸರು ಕೊಟ್ಟಿದ್ದಾನೆ. ವಾಗ್ಭಟಾಲಂಕಾರದಲ್ಲಿ ದಂಡಿಯಂತೆ ಎರಡು, ವಾಗ್ಭಟನ ಕಾವ್ಯಾನುಶಾಸನದಲ್ಲಿ ವಾಮನನಂತೆ ಮೂರು ರೀತಿಗಳನ್ನು ಹೇಳಲಾಗಿದೆ.

ರೀತಿ ಮತ್ತು ವೃತ್ತಿಗಳ ಸಂಖ್ಯೆ, ಉಪಯೋಗ, ವಿವರಣೆಗಳಲ್ಲಿ ಲಾಕ್ಷಣಿಕರಲ್ಲಿ ಒಮ್ಮತವಿಲ್ಲ.

**ರುದ್ರಟ:-** ವೈದರ್ಭ, ಗೌಡೀ, ಪಾಂಚಾಲೀ, ಲಾಟೀ ಎಂಬ ನಾಲ್ಕು ರೀತಿಗಳನ್ನು ಮಧುರಾ, ಪರುಷಾ, ಲಲಿತಾ, ಭದ್ರಾ ಎಂಬ ನಾಲ್ಕು ವೃತ್ತಿಗಳನ್ನೂ ತಿಳಿಸುತ್ತಾನೆ. ರೀತಿಗಳನ್ನು ಸಮಾಸಪದಗಳಿಗೂ ವೃತ್ತಿಗಳನ್ನು ಅನುಪ್ರಾಸಕ್ಕೂ ಸಂಬಂಧಿಸಿ ಅವನು ವ್ಯಾಖ್ಯಾನಿಸುತ್ತಾನೆ.

**ಮಮ್ಮಟ:-**ವಾಮನ ಮೊದಲಾದವರು ಉಪನಾಗರಿಕಾ, ಪರುಷಾ, ಕೋಮಲಾ ವೃತ್ತಿಗಳನ್ನು ವೈದರ್ಭಿ, ಪಾಂಚಾಲೀ, ಗೌಡೀ ರೀತಿಗಳೆಂದು ತಿಳಿಯುವರೆಂದು ಮಮ್ಮಟನು ತಿಳಿಸುತ್ತಾನೆ. ಭರತನ ಪ್ರಸಿದ್ಧವಾದ ಕೌಶಿಕ್ಯಾದಿ ವೃತ್ತಿಗಳು ಕಾವ್ಯಾಲಂಕಾರಾದಿಗಳಲ್ಲಿ ವಿವರಿಸಿದ ಉಪನಾಗರಿಕಾದಿ ವೃತ್ತಿಗಳನ್ನು ಕಾವ್ಯಗಳಲ್ಲಿ ಔಚಿತ್ಯವಲ್ಲದ ವಿಷಯಗಳಲ್ಲಿ ಉಪಯೋಗಿಸಿದರೆ ರಸಭಂಗವಾಗುವುದು.

ಮಮ್ಮಟ:-ಮಾಧುರ್ಯ ಗುಣವನ್ನುಂಟುಮಾಡುವ ಅಕ್ಷರಗಳುಳ್ಳದ್ದು ಉಪನಾಗರಿಕಾ, ಓಜೋಗುಣದ ವರ್ಣಗಳುಳ್ಳದ್ದು ಪರುಷಾ, ಪ್ರಸಾದ ಗುಣದ ವರ್ಣಗಳಿಂದ ಕೂಡಿದುದು ಕೋಮಲಾ ಎಂದು ತಿಳಿಸುವುದು ಪ್ರಸಿದ್ಧ ವಿಚಾರವಾಗಿದೆ.

**ಭೋಜ:-** ತನ್ನ ಸರಸ್ವತೀ ಕಂಠಾಭರಣದಲ್ಲಿ ವೃತ್ತಿ ರೀತಿಗಳನ್ನು ೨೪ ಶಬ್ದಾಲಂಕಾರಗಳಲ್ಲಿ ಕೂಡಿಸಿ ಹೇಳಿದ್ದಾನೆ. ಅಲ್ಲಿ ಭಾರತೀ, ಕೈಶಿಕೀ, ಸಾತ್ವತೀ, ಆರಭಟೀ, ಮಧ್ಯಮಾರಭಟೀ, ಮಧ್ಯಮ ಕೈಶಿಕೀ ಎಂದು ಆರು ವೃತ್ತಿಗಳ ಪ್ರಸ್ತಾವವಿದೆ. ಅಷ್ಟು ಮಾತ್ರವಲ್ಲ, ವೈದರ್ಭಿ, ಪಾಂಚಾಲಿ, ಗಾಡೀಯಾ, ಆವಂತಿಕಾ, ಲಾಟಿಯಾ, ಮಾಗಧಿ ಎಂದು ಆರು ರೀತಿಗಳ ವಿವರಗಳೂ ಇವೆ.

**ರಾಜಶೇಖರ:-** ವೇಷವಿನ್ಯಾಸಕ್ರಮವು ಪ್ರವೃತ್ತಿ: ವಿಲಾಸವಿನ್ಯಾಸಕ್ರಮ ವೃತ್ತಿ;

ವಚನ ವಿನ್ಯಾಸಕ್ರಮ ರೀತಿ ಎಂದು ಪ್ರವೃತ್ತಿ, ವೃತ್ತಿ ಮತ್ತು ರೀತಿಗಳ ಬಗೆಗೆ ವಿವರಣೆ ಕೊಡುವುದು ಮುಖ್ಯ ಸಂಗತಿಯಾಗಿದೆ. ಈ ವಿವರಣೆ ಚರ್ಚೆಗೆ ಅರ್ಹವಾಗಿದೆ.

**ಮಾರ್ಗ:-** ಈ ವಿಶಿಷ್ಟಪದವು 'ಅಲಂಕಾರಶಾಸ್ತ್ರ'ದಲ್ಲಿ ಬಗೆಬಗೆಯ ಅರ್ಥದ ನೆಲೆಗಳಲ್ಲಿ ವ್ಯಾಖ್ಯಾನಗೊಂಡಿದೆ. ಸಂಸ್ಕೃತ ಹಾಗೂ ಕನ್ನಡ ಕಾವ್ಯಚಿಂತಕರು ಮೂರು ಬಗೆಯ ನೆಲೆಗಳಲ್ಲಿ ಇದನ್ನು ವ್ಯಾಖ್ಯಾನಿಸಿದ್ದಾರೆ.

1. ಕವಿಗಳಲ್ಲಿ ಕಂಡು ಬರುವ ಪ್ರಾದೇಶಿಕ ವೈಶಿಷ್ಟ್ಯ. ದಂಡಿಯು ತನ್ನ ಗುಣಸಂಬಂಧೀ ವಿವೇಚನೆಯಲ್ಲಿ ವೈದರ್ಭಿ ಮತ್ತು ಗೌಡೀ ಎಂಬ ಎರಡು ವಿಧಗಳನ್ನು ಗುರುತಿಸುತ್ತಾನಷ್ಟೆ. ಅಲ್ಲದೆ, ಇವೆರಡರ ನಡುವೆ ತರತಮಭಾವ ಉಂಟೆಂದು ವಾದಿಸುತ್ತಾನೆ. ಭಾಮಹನಿಗೆ ಮಾರ್ಗ ಕಲ್ಪನೆಯ ಪರಿಚಯವಿದ್ದರೂ ಅವನ್ನು ವಿರೋಧಿಸಿದ. ಆದರೆ, ವಾಮನನಲ್ಲಿ ಮಾರ್ಗವೇ ರೀತಿಯ ಬದಲಾಗಿ ಬೆಳೆಯುತ್ತದೆ.
2. ಕುಂತಕನು ಕವಿಯ ವಿಶಿಷ್ಟವಾದ, ಸ್ವಭಾವಸಿದ್ಧವಾದ ಬರವಣಿಗೆಯ ರೀತಿಯನ್ನು ಮಾರ್ಗ ಎಂದು ಹೇಳುತ್ತಾನೆ. ಅವು ಮೂರು: ೧. ಸುಕುಮಾರ ೨. ವಿಚಿತ್ರ, ೩. ಮಧ್ಯಮ ಇವು ಪ್ರಾದೇಶಿಕ ಅಂಶರೂಪಿತವಾಗದಿರುವುದು ಒಂದು ವಿಶೇಷ.
3. ಕನ್ನಡ ಕಾವ್ಯಸಂದರ್ಭದಲ್ಲಿ ಮಾರ್ಗವೆಂದರೆ ಪ್ರೌಢವಾದ ಮತ್ತು ಲಕ್ಷಣ ಸಮನ್ವಿತವಾದ ಕಾವ್ಯರಚನೆ. ಬಳಕೆಯಿಲ್ಲ. Sಣಥಿಟe ನ ಪರಿಕಲ್ಪನೆಗೆ ಹತ್ತಿರಬರುವ ಪದಗಳೆಂದರೆ 'ರೀತಿ' ಮತ್ತು 'ಮಾರ್ಗ'

ಸಾಹಿತ್ಯದರ್ಪಣ:- ಕೃತಿಯ ಪ್ರಕಾರ ರೀತಿಯ ಲಕ್ಷಣಗಳು

1. ಮಾಧುರ್ಯವ್ಯಂಜಕವಾದ ವರ್ಣಗಳಿಂದಲೂ ಸಮಾಸವಿಲ್ಲದ-ಅಥವಾ ಸಣ್ಣಸಣ್ಣ ಸಮಾಸಗಳುಳ್ಳ-ಪದಗಳಿಂದಲೂ ಕೂಡಿರುವ ಲಲಿತವಾದ ಪದರಚನೆಯು 'ವೈದರ್ಭಿ'
2. ಓಜೋವ್ಯಂಜಕವಾದ ವರ್ಣಗಳಿಂದಲೂ ದೊಡ್ಡ ದೊಡ್ಡ ಸಮಾಸ ಗಳಿಂದಲೂ ಕೂಡಿರುವ, ಆಡಂಬರವುಳ್ಳ ಮತ್ತು ಬಿಗಿಯಾದ ಪದರಚನೆ 'ಗೌಡಿ'.
3. ಮಿಕ್ಕ ವರ್ಣಗಳಿಂದ ಕೂಡಿಯೂ ಸಣ್ಣ ಸಮಾಸಗಳುಳ್ಳದ್ದಾಗಿಯೂ ಇರುವ ಪದರಚನೆ 'ಪಾಂಚಾಲಿ'.
4. ಹೀಗೆ ವೈದರ್ಭಿ ಪಾಂಚಾಲೀ ರೀತಿಗಳಿಗೆ ಮಧ್ಯೆ ಇರುವುದು 'ಲಾಟಿ' ಎಂದು ಹೇಳಿದೆ.

ಈ ವೈದರ್ಭಿ ಗೌಡೀರೀತಿಗಳನ್ನೇ ನೃಪತುಂಗ (ಶ್ರೀವಿಜಯ)ನೂ (ಕವಿರಾಜಮಾರ್ಗ ii, ೪೭-೯೫) ನಾಗವರ್ಮನ (ಕಾವ್ಯಾವಲೋಕನ 111. ೧೨೪) ದಕ್ಷಿಣೋತ್ತರ ಮಾರ್ಗಗಳೆಂದು ಹೇಳಿದ್ದಾರೆ. ನೃಪತುಂಗನು ಮಾತ್ರ ಸ್ವಭಾವೋಕ್ತಿ ದಕ್ಷಿಣ ಮಾರ್ಗಕ್ಕೂ ವಕ್ರೋಕ್ತಿ ಉತ್ತರಮಾರ್ಗಕ್ಕೂ ಭೇದಕಗುಣವೆಂದು ಒಂದು ಅಂಶವನ್ನು ಹೆಚ್ಚಾಗಿ ಹೇಳಿದ್ದಾನೆ. (11, ೫೧). ನಾಗವರ್ಮನು ಭಾಮಹನನ್ನು ಅನುಸರಿಸಿ "ವೈದರ್ಭಗೌಡ ಮಾರ್ಗ ವಿಭೇದಂ ಬಗೆವೊಡೆ ಗತಾನುಗತಿಕಂ" ಎಂದು (III. 038) .

ಇದಲ್ಲದೆ "ಸಮಾನಾರ್ಥಕವಾದ ದ್ವಿರೂಪ ಕ್ರಿಯೆಗಳಲ್ಲಿಯೂ ಉತ್ತಮ ಪುರುಷ ದ್ವಿರೂಪ ಸರ್ವನಾಮಗಳಲ್ಲಿಯೂ ಅನ್ಯತರವನ್ನು ಪ್ರಯೋಗಿಸುವುದರಿಂದ ದಕ್ಷಿಣೋತ್ತರ ಮಾರ್ಗಭೇದಗಳಾಗುತ್ತವೆಯೆಂದು ನೃಪತುಂಗ (ಶ್ರೀ ವಿಜಯ) ನೂ ಭಟ್ಟಾಕಳಂಕನೂ ಸೂಚಿಸುತ್ತಾರೆ. ಈ ಭೇದವು "ಅತ್ಯಲ್ಪವಾಗಿಯೂ ಅಮುಖ್ಯವಾಗಿಯೂ" ಇರುವುದರಿಂದಲೂ, ಭಾಷಾ ವಿಚಾರಕ್ಕೆ ಸಂಬಂಧಪಟ್ಟಿರುವು ದರಿಂದಲೂ ಅದನ್ನು ಇಲ್ಲಿ ವಿಸ್ತರಿಸುವುದು ಅನಾವಶ್ಯಕ.

ಇದಲ್ಲದೆ ಭಾವಾಶ್ರಯವಾದ 'ನೃತ್ಯ'ಕ್ಕೆ ಮಾರ್ಗವೆಂದೂ ತಾಲಲಯಾಶ್ರಯ ವಾದ 'ನೃತ್ತ'ಕ್ಕೆ ದೇಶಿ (ದೇಸಿ)ಯೆಂದೂ ಹೆಸರಿರುವಂತೆ ದಶರೂಪಕದಿಂದ ತಿಳಿಯ ಬರುತ್ತದೆ (I, ೯), ಆದರೆ ಇದಕ್ಕೂ ದಕ್ಷಿಣೋತ್ತರಮಾರ್ಗಕ್ಕೂ ಸಂಬಂಧವಿಲ್ಲ.

'ರೀತಿ' ಅಥವಾ 'ಮಾರ್ಗ'ದ ಸಂದರ್ಭದಲ್ಲಿ ಸಂಸ್ಕೃತಾಲಂಕಾರಿಕರು ಯಾರೂ 'ದೇಸಿ'ಯ ಪ್ರಸ್ತಾಪವನ್ನೆತ್ತುವುದಿಲ್ಲ. ನೃಪತುಂಗನು ಮಾತ್ರ ಮಾರ್ಗಗಳ ವಿಚಾರವನ್ನು ವಿಸ್ತಾರವಾಗಿ ಹೇಳಿರುವುದಲ್ಲದೆ (11, ೪೫.) 'ದೇಸಿ' 'ಮಾರ್ಗ'ಗಳಿಗೆ ಭೇದವನ್ನು ಹೇಳಿದಂತಿದೆ (ಪುಟ ೮, ೧೨, ೨೫ ಇತ್ಯಾದಿ.), ಆದರೆ ಇದು ಸ್ಪಷ್ಟವಾಗಿಲ್ಲ.

ಮಾಧುರ್ಯ ಓಜಸ್ಸು ಕೋಮಲತೆಗಳನ್ನು ವ್ಯಕ್ತಗೊಳಿಸುವ ವರ್ಣಗಳಿಂದ ಕೂಡಿದ ಪದರಚನೆಗಳನ್ನು ಕಾವ್ಯಪ್ರಕಾಶಕಾರನು ಕ್ರಮವಾಗಿ 'ಉಪನಾಗರಿಕ ವೃತ್ತಿ,' 'ಪರುಷವೃತ್ತಿ', 'ಕೋಮಲವೃತ್ತಿ'ಗಳೆಂದು ಕರೆದು, ಇವುಗಳನ್ನೇ ವಾಮನಾದಿಗಳು ವೈದರ್ಭಿ, ಗೌಡೀ, ಪಾಂಚಾಲೀ 'ರೀತಿ'ಗಳೆಂದು ಕರೆಯುತ್ತಾರೆಂದು ಹೇಳುತ್ತಾನೆ (Iಫಿ, ೮೦). ಆದರೆ 'ವೃತ್ತಿ'ಯೆಂಬ ಹೆಸರನ್ನು ಅರ್ಥವಿಶೇಷಕ್ಕೂ (ಎಂದರೆ ಚಿತ್ತವಿಕಾಸ ಸಂಕೋಚಾದಿಗಳನ್ನು ಉಂಟುಮಾಡುವ ರಸವಿಶೇಷಗಳನ್ನು ಒಳಗೊಂಡ ವಿಷಯಗಳಿಗೂ) 'ರೀತಿ' ಎಂಬ ಹೆಸರನ್ನು ಪದರಚನಾವಿಶೇಷಕ್ಕೂ ಕೊಡುವುದು ರೂಢಿಯಾಗಿದೆ.

**ಶಯ್ಯೆ:-** ಪದಗಳಿಗೆ ಇರತಕ್ಕ ಅನ್ಯೋನ್ಯವಾದ ಮೈತ್ರಿಗೆ ಶಯ್ಯೆ ಎಂದು ಹೆಸರು.ಶಯ್ಯೆಗೇ 'ಪದಾನುಗುಣ್ಯ'ವೆಂದೂ, 'ಪದಮೈತ್ರಿ'ಯೆಂದೂ ಹೆಸರು

'ಪದಗಳನ್ನು ಹೊಂದಿಕೆಯಾಗಿರುವಂತೆ ಜೋಡಿಸಿದರೆ ಆ ರಚನೆ, ಸುಕ್ಕಿಲ್ಲದೆ ಉಬ್ಬು ತಗ್ಗುಗಳಿಲ್ಲದೆ ಒಂದೇ ಸಮನಾಗಿದ್ದು ನೋಡುವುದಕ್ಕೂ ಮಲಗುವುದಕ್ಕೂ ಹಿತಕರವಾದ ಹಾಸಿಗೆಯಂತೆ ಮನೋಹರವಾಗಿರುತ್ತದೆ. ಅದೇ ಪದಗಳನ್ನೇ ಇಟ್ಟುಕೊಂಡು ಅವುಗಳ ಕ್ರಮವನ್ನು ವ್ಯತ್ಯಾಸಪಡಿಸಿದರೇ ಆಗಲಿ, ಅದೇ ಅರ್ಥವಿರುವಂತೆ ಬೇರೆ ಪದಗಳನ್ನು ಉಪಯೋಗಿಸಿದರೇ ಆಗಲಿ, ಆ ರಚನೆ ಗಂಟುಗಂಟಾದ ಹಾಸಿಗೆಯಂತೆಯೂ ಕಲ್ಲುಗಳು ಎದ್ದಿರುವ ಬೀದಿಯಂತೆಯೂ ಮನಸ್ಸಿಗೆ ತೋರುತ್ತದೆ.

**ವೃತ್ತಿಗಳು:-**ಭರತ:-ವೃತ್ತಿಗಳ ಮುಖ್ಯ ಪ್ರಸ್ತಾವ ಬರುವುದು ಭರತನಲ್ಲಿಯೇ. ವೃತ್ತಿಗಳ ಹುಟ್ಟಿನ ಬಗ್ಗೆ ಭರತ ಒಂದು ಕತೆಯನ್ನೇ ನೆಯ್ದಿದ್ದಾನೆ. "ಭಗವಂತನ ಹೆಜ್ಜೆಗಳು ಭೂಮಿಗೆ 'ಅತಿಭಾರ' ಆದುದಕ್ಕೆ 'ಭಾರತೀ' ಎಂದೂ ಕೇಶಪಾಶ ಕಟ್ಟಿದ್ದಕ್ಕೆ 'ಕೈಶಿಕೀ' ಎಂದೂ ಗುರಿತಪ್ಪದ ಸತ್ವಶಾಲಿ ಬಾಣಗಳನ್ನು ಬಿಟ್ಟಿದ್ದಕ್ಕೆ ಸಾತ್ವತೀ ಎಂದೂ ಚಿತ್ರವಿಚಿತ್ರ ಹೋರಾಟದ ಫಲಕ್ಕೆ ಆರಭಟೀ ಎಂದೂ ಭರತ ಹೇಳಿದ್ದಾನೆ.

ನಾಲ್ಕು ವೇದಗಳಿಂದ ನಾಲ್ಕು ವೃತ್ತಿಗಳು ಹುಟ್ಟಿದುವೆನ್ನುವಾಗ ನಾಟ್ಯಶಾಸ್ತ್ರದ ಮೊದಲನೆಯ ಅಧ್ಯಾಯದಲ್ಲಿ ನಾಟ್ಯವೇದವನ್ನು ನಿರಿಸಿದ ಬಗೆಗಿನ ಕಥೆಯನ್ನು ನೆನಪಿಸಿಕೊಳ್ಳಬಹುದು. ಈಗ ಋಗ್ವೇದದಿಂದ ಭಾರತೀ, ಸಾಮವೇದದಿಂದ ಕೈಶಿಕೀ, ಯಜುರ್ವೇದದಿಂದ ಸಾತ್ವತಿ ಮತ್ತು ಅಥರ್ವಣ ವೇದದಿಂದ ಆರಭಟೀ ವೃತ್ತಿಗಳನ್ನು ನಿರ್ಮಿಸಲಾಗಿದೆ. ಈ ಮಾತಿನ ತಾತ್ಪರ್ಯ **ಇಷ್ಟು:** ನಾಟ್ಯವೇದಕ್ಕೂ ವೃತ್ತಿಗೂ ಒಂದೇ ಉಗಮಸ್ಥಾನ ಕಲ್ಪಿಸಿದಂತಾಯಿತು. ಇಷ್ಟು ಮಾತ್ರವಲ್ಲ ಸ್ಥೂಲವಾಗಿ ಪಾಠವೆಂದರೆ ಭಾರತೀ, ಗೀತವೆಂದರೆ ಕೈಶಿಕೀ, ಅಭಿನಯ ಎಂದರೆ ಸಾತ್ವತೀ, ರಸ ಎಂದರೆ ಆರಭಟೀ ಎಂದು ಹೇಳಿದಂತಾಯಿತು. ಈ ಭಾಗಕ್ಕೆ

ಅಭಿನವಗುಪ್ತನು ವ್ಯಾಖ್ಯಾನ ಬರೆಯುವಾಗ

"ಕಾಯ ವಾಚ ಮನಸಾ ಚೇಷ್ಟಾ ವಿವ ಸಹ ವೈಚಿತ್ರೇಣ ವೃತ್ತಯಃ"ದೇಹ, ಮಾತು-ಮನಸ್ಸುಗಳ ವಿಚಿತ್ರ ಚೇಷ್ಟೆಯೇ ವೃತ್ತಿ ಎಂದು ಹೇಳಿದ್ದಾನೆ.

ಧನಂಜಯನ ಪ್ರಕಾರ:-'ಪದ ವ್ಯಾಪಾರಾತ್ಮಿಕಾ ವೃತ್ತಿಃ' (ನಾಯಕನ ವ್ಯಾಪಾರ ಕ್ರಿಯೆಗೆ ಸಂಬಂಧಿಸಿದ್ದು ವೃತ್ತಿ) ಮಾತ್ರ. ವೃತ್ತಿಗಳು ವ್ಯಾಖ್ಯಾನ೨ಇದು ಶ್ರವ್ಯಕಾವ್ಯದಲ್ಲಿ ಬಳಕೆಯಾಗುವ ಪರಿಕಲ್ಪನೆ, ದೃಶ್ಯಕಾವ್ಯಕ್ಕೆ ಸಂಬಂಧಿಸಿದಂತೆ ಭರತನು ಬೇರೆ ರೀತಿಯಾಗಿ ಹೇಳುತ್ತಾನೆ. ಶಬ್ದಗಳನ್ನು ಅವಲಂಬಿಸಿರುವ ಉಪನಾಗರಿಕಾ ಮುಂತಾದ ವೃತ್ತಿಗಳು ರೀತಿಗೆ ಸಮಾನವಾಗುತ್ತವೆ. ಇವು ಕಾವ್ಯಾತ್ಮಕವಾದ ರಸವನ್ನೇ ಅವಲಂಬಿಸಿರುತ್ತವೆ. ಈ ಬಗೆಗೆ ವಿವರವಾಗಿ ಧ್ವನ್ಯಾಲೋಕದಲ್ಲಿ ಚರ್ಚಿತವಾಗಿದೆ. ಉಪನಾಗರಿಕಾ, ಪರುಷಾ ಮತ್ತು ಗ್ರಾಮೀಣ (ಕೆಲವರು ಇದನ್ನು ಕೋಮಲಾ ಎಂದು ಕರೆಯುತ್ತಾರೆ) ಈ ಮೂರೂ ವೃತ್ತಿಗಳನ್ನು ಉದ್ಭಟ, ಮಮ್ಮಟ ಮತ್ತು ಇತರ ಕೆಲವು ಲಾಕ್ಷಣಿಕರು ಹೇಳಿದ್ದಾರೆ. ಉದ್ಭಟನ ಪ್ರಕಾರ ಈ ವೃತ್ತಿಗಳ ಲಕ್ಷಣಗಳು ಹೀಗಿವೆ: 'ಉಪನಾಗರಿಕಾ' -ಶೃಂಗಾರಕ್ಕೆ ಅನುರೂಪವಾದದ್ದು. 'ಪರುಷಾ' -ವೀರ ಮತ್ತು ರೌದ್ರಕ್ಕೆ ಉಚಿತವಾದದ್ದು. 'ಕೋಮಲ'ವು ಹಾಸ್ಯರಸಕ್ಕೆ ಯೋಗ್ಯವಾದದ್ದು.

**ರುದ್ರಟ:-** ಇವುಗಳಲ್ಲದೆ ಇನ್ನೂ ಐದು ವೃತ್ತಿಗಳನ್ನು ಹೇಳಿದ್ದಾನೆ. ಅವನು ಹೇಳಿರುವ ವೃತ್ತಿಗಳು ಇವು: ಮಧುರಾ, ಲಲಿತಾ, ಪ್ರೌಢಾ, ಪರುಷಾ ಮತ್ತು ಭದ್ರಾ.

ವೃತ್ತಿಗಳು:-ನಾಯಕಕಾರ್ಯಾದಿಘಟನೆಗಳ ಸ್ವಭಾವಕ್ಕೆ 'ವೃತ್ತಿ" (ವ್ಯಾಪಾರ-ಕೆಲಸ) ಎಂದು ಹೆಸರು. ಇದು ಕೈಶಿಕೀ, ಸಾತ್ವತೀ, ಆರಭಟೀ, ಭಾರತೀ ಎಂದು ನಾಲ್ಕು ವಿಧ.

ಕೈಶಿಕಿ:- ಇದು ಶೃಂಗಾರ ರಸದಲ್ಲಿ ಬರುತ್ತದೆ

ಗೀತ ನೃತ್ಯ ವಿಲಾಸಾದಿ ಶೃಂಗಾರಚೇಷ್ಟೆಗಳಿಂದ ಕೂಡಿ ಮೃದುವಾಗಿ ಇರುವುದು (ಉದಾಹರಣೆ: ರತ್ನಾವಳಿ),

ಸಾತ್ವತಿ:- ಇದು ವೀರರಸದಲ್ಲಿ ಬರುತ್ತದೆ

ಸತ್ತ್ವ, ಶೌರ್ಯ, ತ್ಯಾಗ, ದಯೆ, ಹರ್ಷ ಮುಂತಾದವುಗಳಿಂದ ಕೂಡಿ ಗೆಲುವಾಗಿರುವುದು (ಉದಾಹರಣೆ: ಗದಾಯುದ್ಧ, ನಾಗಾನಂದ),

**ಆರಭಟಿ:-** ಇದು ರೌದ್ರ ಮತ್ತು ವಿಭ್ಸರಸಗಳಲ್ಲಿ ಬರುತ್ತದೆ

ಮಾಯೆ, ಇಂದ್ರ ಜಾಲ, ಜಗಳ, ಕೋಪ. ಕಳವಳ ಇವುಗಳಿಂದ ಕೂಡಿ ಉದ್ಧತವಾಗಿರುವುದು (ಉದಾಹರಣೆ: ಮುದ್ರಾರಾಕ್ಷಸ, ಜಾನಕೀಪರಿಣಯ, ವೇಣೀಸಂಹಾರ), ನ್ಯಾಯವಾಗಿ ಇರತಕ್ಕ ವೃತ್ತಿಗಳು ಇವು ಮೂರೇ. ಏಕೆಂದರೆ ನಾಲ್ಕನೆಯದೆಂದು ಹೇಳುವ

**'ಭಾರತೀ' :-** ಇದು ಎಲ್ಲಾ ರಸಗಳಲ್ಲೂ ಬರುತ್ತದೆ

ವೃತ್ತಿ ಘಟನೆಗಳ ಸ್ವಭಾವದ ಮೇಲೆ ಸಿದ್ಧವಾದದ್ದಲ್ಲ. ಅದು ನಟರು ಆಡುವ ಮಾತಿನ ವೈಚಿತ್ರ್ಯ.

ರುದ್ರಟ:-ವೈದರ್ಭ, ಗೌಡೀ, ಪಾಂಚಾಲೀ, ಲಾಟೀ ಎಂಬ ನಾಲ್ಕು ರೀತಿಗಳನ್ನು ಮಧುರಾ, ಪರುಷಾ, ಲಲಿತಾ, ಭದ್ರಾ ಎಂಬ ನಾಲ್ಕು ವೃತ್ತಿಗಳನ್ನೂ ತಿಳಿಸುತ್ತಾನೆ. ರೀತಿಗಳನ್ನು ಸಮಾಸಪದಗಳಿಗೂ ವೃತ್ತಿಗಳನ್ನು ಅನುಪ್ರಾಸಕ್ಕೂ ಸಂಬಂಧಿಸಿ ಅವನು ವ್ಯಾಖ್ಯಾನಿಸುತ್ತಾನೆ.

ಮಮ್ಮಟ:-ವಾಮನ ಮೊದಲಾದವರು ಉಪನಾಗರಿಕಾ, ಪರುಷಾ, ಕೋಮಲಾ ವೃತ್ತಿಗಳನ್ನು ವೈದರ್ಭಿ, ಪಾಂಚಾಲೀ, ಗೌಡೀ ರೀತಿಗಳೆಂದು ತಿಳಿಯುವರೆಂದು ಮಮ್ಮಟನು ತಿಳಿಸುತ್ತಾನೆ. ಭರತನ ಪ್ರಸಿದ್ಧವಾದ ಕೌಶಿಕ್ಯಾದಿ ವೃತ್ತಿಗಳು ಕಾವ್ಯಾಲಂಕಾರಾದಿಗಳಲ್ಲಿ ವಿವರಿಸಿದ ಉಪನಾಗರಿಕಾದಿ ವೃತ್ತಿಗಳನ್ನು ಕಾವ್ಯಗಳಲ್ಲಿ ಔಚಿತ್ಯವಲ್ಲದ ವಿಷಯಗಳಲ್ಲಿ ಉಪಯೋಗಿಸಿದರೆ ರಸಭಂಗವಾಗುವುದು.

ಮಮ್ಮಟ:-ಮಾಧುರ್ಯ ಗುಣವನ್ನುಂಟುಮಾಡುವ ಅಕ್ಷರಗಳುಳ್ಳದ್ದು ಉಪನಾಗರಿಕಾ, ಓಜೋಗುಣದ ವರ್ಣಗಳುಳ್ಳದ್ದು ಪರುಷಾ, ಪ್ರಸಾದ ಗುಣದ ವರ್ಣಗಳಿಂದ ಕೂಡಿದುದು ಕೋಮಲಾ ಎಂದು ತಿಳಿಸುವುದು ಪ್ರಸಿದ್ಧ ವಿಚಾರವಾಗಿದೆ.

**ಭೋಜ:-** ತನ್ನ ಸರಸ್ವತೀ ಕಂಠಾಭರಣದಲ್ಲಿ ವೃತ್ತಿ ರೀತಿಗಳನ್ನು ೨೪ ಶಬ್ದಾಲಂಕಾರಗಳಲ್ಲಿ ಕೂಡಿಸಿ ಹೇಳಿದ್ದಾನೆ. ಅಲ್ಲಿ ಭಾರತೀ, ಕೈಶಿಕೀ, ಸಾತ್ವತೀ, ಆರಭಟೀ, ಮಧ್ಯಮಾರಭಟೀ, ಮಧ್ಯಮ ಕೈಶಿಕೀ ಎಂದು ಆರು ವೃತ್ತಿಗಳ ಪ್ರಸ್ತಾವವಿದೆ. ಅಷ್ಟು ಮಾತ್ರವಲ್ಲ, ವೈದರ್ಭಿ, ಪಾಂಚಾಲಿ, ಗಾಡೀಯಾ, ಆವಂತಿಕಾ, ಲಾಟಿಯಾ, ಮಾಗಧಿ ಎಂದು ಆರು ರೀತಿಗಳ ವಿವರಗಳೂ ಇವೆ.

**ರಾಜಶೇಖರ:-** ವೇಷವಿನ್ಯಾಸಕ್ರಮವು ಪ್ರವೃತ್ತಿ: ವಿಲಾಸವಿನ್ಯಾಸಕ್ರಮ ವೃತ್ತಿ;

ವಚನ ವಿನ್ಯಾಸಕ್ರಮ ರೀತಿ ಎಂದು ಪ್ರವೃತ್ತಿ, ವೃತ್ತಿ ಮತ್ತು ರೀತಿಗಳ ಬಗೆಗೆ ವಿವರಣೆ ಕೊಡುವುದು ಮುಖ್ಯ ಸಂಗತಿಯಾಗಿದೆ. ಈ ವಿವರಣೆ ಚರ್ಚೆಗೆ ಅರ್ಹವಾಗಿದೆ.

**ಶೈಲಿ:-** ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಸ್ಟೈಲ್ (=ಶೈಲಿ) ಚರ್ಚೆ ವಿಸ್ತಾರವಾಗಿದೆ. ಅದನ್ನಿಲ್ಲಿ ಸಂಗ್ರಹಿಸಬಹುದು. ಒಂದು ಕವನದ ವಸ್ತುವಿಗೂ ಮತ್ತು ಅದರ ಆಕಾರ (=ಭಾಷೆ) ಕ್ಕೂ ಇರುವ ಸಂಬಂಧವನ್ನು ನಿರ್ಣಯಿಸುವ ಪ್ರಶ್ನೆ ಬಂದಾಗ ಶೈಲಿಯ ಪರಿಕಲ್ಪನೆ ಬಳಕೆಯಾಗಿದೆ.

ಎರಡು ಬಗೆಗಳಲ್ಲಿ ಈ ಪ್ರಶ್ನೆಗೆ ಉತ್ತರ ನೀಡಲಾಗಿದೆ.

1. **ಅಲಂಕರಣಸಾಧನ:-** ಕವನದ ಭಾಷೆಯೆಂಬುದು ವಸ್ತುವಿಗೆ ಹೊದಿಸಿದ ಹೊದಿಕೆ. ಆದ್ದರಿಂದ ಇಲ್ಲಿ ಶೈಲಿಯೆಂದರೆ ಅಲಂಕರಣಸಾಧನ. ರೆನೆಸಾನ್ಸ್ ಮತ್ತು ನಿಯೋಕ್ಲಾಸಿಕಲ್ ಯುಗಗಳ ಅಭಿಪ್ರಾಯ ಇದಾಗಿದೆ.
2. **ಸಾವಯವ ಸಂಬಂಧ:-** ವಸ್ತು ಮತ್ತು ಭಾಷೆ ಇವುಗಳ ನಡುವೆ ರೂಪುಗೊಳ್ಳುವ, ಬೇರ್ಪಡಿಸಲಾರದ. ಅನನ್ಯವಾದ ಸಾವಯವ ಸಂಬಂಧವೇ ಶೈಲಿ. ರೆನೆಸಾನ್ಸ್ ಕಾಲದ ಕೆಲವರಲ್ಲಿ (ಬೆನ್ಜಾನ್ಸನ್) ಮತ್ತು ರೊಮ್ಯಾಂಟಿಕ್ ಯುಗಗಳ ಅಭಿಪ್ರಾಯ.

**ಮಿಥ್ಲೆಟನ್ ಮುರೆ:-** ಸ್ಟೈಲ್ ಎಂದರೆ ಉಡುಗೆಯಲ್ಲ; ಅದು ದೇಹದ ರಕ್ತಮಾಂಸಗಳಿದ್ದಂತೆ ಎಂಬ ಮಿಥ್ಲೆಟನ್ ಮುರೆಯ ಮಾತಿನಲ್ಲಿ ಸಾವಯವ ಸಂಬಂಧವೇ ಶೈಲಿಯೆಂಬ ಮಾತಿನ ಸಮರ್ಥನೆಯಿದೆ.

ಶೈಲಿಯು

1. ವರ್ಣಿತವಾದ ವಸ್ತು
2. ವರ್ಣಿಸುತ್ತಿರುವ ಕವಿ
3. ವರ್ಣಿತವಾದ ಕಾಲವನ್ನು ಅವಲಂಬಿಸಿರುವುದೆಂದು ಹೇಳಲಾಗಿದೆ.

ಒಂದು ವಸ್ತು, ಸಂಗತಿ, ಘಟನೆಗಳನ್ನು ವರ್ಣಿಸುವಾಗ ಅವುಗಳಿಗೆ ನಿಶ್ಚಿತವಿರುವ ಪ್ರಕೃತಿಯನ್ನು ಅನುಸರಿಸಿ ಶೈಲಿ ಬದಲಾಗುತ್ತದೆ. ಕೆಲವು ವೇಳೆ ಸಾಹಿತ್ಯ ಪ್ರಕಾರಗಳನ್ನು ಅನುಸರಿಸಿ ಬದಲಾಗುತ್ತದೆ. ಹೈಸ್ಟೈಲ್, ಬೇಸ್ ಸ್ಟೈಲ್ ಮತ್ತು ಮಿಡಲ್ ಸ್ಟೈಲ್ ಎಂದು ಮೂರು ಬಗೆಗಳು. ಪಾತ್ರಗಳು ಯಾವ ಯಾವ ವರ್ಗಗಳಿಂದ ಬಂದವು ಎಂಬುದನ್ನು ಅವಲಂಬಿಸಿ ಅವುಗಳ ಮಾತಿನ, ವರ್ಣನೆಯಲ್ಲಿ ಶೈಲಿ ನಿರ್ಧಾರವಾಗುತ್ತದೆ.

**ಶೈಲಿಯ ವಿಧಗಳು:-**

1. ಮಹಾಕಾವ್ಯಕ್ಕೆ ಹೈ ಸ್ಟೈಲ್ ಸೂಕ್ತ.
2. ಚರಮಗೀತೆಗೆ ಮಿಡಲ್ ಸ್ಟೈಲ್,
3. ವಿಡಂಬನೆಗಳಿಗೆ ಬೇಸ್ ಸ್ಟೈಲ್ ಸರಿಯಾದುದು.
   ಆದರೆ ಷೇಕ್ಸ್ ಪಿಯರನಂಥ ಮಹಾನಾಟಕಕಾರ ಈ ನಿಯಮಗಳನ್ನು ಅನುಸರಿಸಿ ಬರೆದಿಲ್ಲವೆಂಬುದು ಮುಖ್ಯ. ಪಾತ್ರಗಳು ಉನ್ನತ ಪ್ರಕೃತಿಯವಾಗಿದ್ದು, ಕೆಳವರ್ಗದಬಳಕೆಯ ಮಾತನ್ನಾಡಿಯೂ ಅನುಚಿತವಾಗದೇ ಹೋದ ಪ್ರಸಂಗಗಳು ಅವನಲ್ಲಿ ಬರುತ್ತವೆ.

ಕವಿಯ ವ್ಯಕ್ತಿತ್ವವನ್ನು ಅವಲಂಬಿಸಿ ಶೈಲಿ ಬದಲಾಗುತ್ತದೆ ಎಂಬ ಮಾತು ಬಫನ್ನ 'ಸ್ಟೈಲ್ ಈಸ್ ಮ್ಯಾನ್' ಎಂಬ ಉಕ್ತಿಯಲ್ಲಿದೆ. ಒಬ್ಬ ಕವಿಯ ವ್ಯಕ್ತಿತ್ವದ ವಿಕ್ಷಿಪ್ತತೆಗಳು, ವೈಶಿಷ್ಟ್ಯಗಳು ಅವನ ಶೈಲಿಯಲ್ಲಿ ಪ್ರತಿಬಿಂಬಿತವಾಗುತ್ತವೆಯೆನ್ನಲಾಯಿತು. ರೊಮ್ಯಾಂಟಿಕ್ ಯುಗದಲ್ಲಿ ಮಹತ್ತ್ವವನ್ನು ಪಡೆದ ಈ ವಾದ, ಫ್ಲಾಯ್ಡನ ಸಂಶೋಧನೆಗಳ ನಂತರ ಇನ್ನೂ ವಿಸ್ತಾರವಾದ ಚರ್ಚೆಗೆ ಒಳಗಾಗಿದೆ.

**ಪಾಕ:-** ಅಲಂಕಾರ ಶಾಸ್ತ್ರದಲ್ಲಿ ಪಾಕ'ವೆಂಬ ಮತ್ತೊಂದು ವಿಶಿಷ್ಟ ಪದದ ಉಪಯೋಗ ಬಹುಕಡೆ ಕಂಡುಬರುತ್ತದೆ. ವಾಮನನು ಅದನ್ನು ಪದಗಳ ಪರಿವೃತ್ತಿ ಇಲ್ಲದುದು ಪಾಕವೆಂದು ಹೇಳುತ್ತಾನೆ.

ಆಲಂಕಾರಿಕರು ಹಲವು ಬಗೆಯ ಪ್ರಕಾರದ ಪಾಕಗಳನ್ನು ತಿಳಿಸುವರು. ಅವುಗಳಲ್ಲಿ ಮುಖ್ಯವಾದವು, ನಾರೀಕೇಳಪಾಕ, ಕ್ರಮುಕಪಾಕ, ಕದಳೀಪಾಕ, ಮೃದ್ವೀಕ ಮೊದಲಾದವು.

ಧ್ವನ್ಯಾಲೋಕದಲ್ಲಿ 'ಸಂಘಟನಾ' ಎಂಬುದನ್ನು ಸಾಮಾನ್ಯವಾಗಿ 'ರೀತಿ'ಗೆ ಸಮಾನವಾದ ಅರ್ಥದಲ್ಲಿ ಉಪಯೋಗಿಸಿರುವಂತೆ ಕಾಣುತ್ತದೆ.

**ಪಾಕ:** ಕವಿಯ ಶಬ್ದ ಪ್ರಯೋಗದ ಮಾನದಂಡ. 'ಇದು ಸೌಶಬ್ದ್ಯ. ಆದ್ದರಿಂದ ಪದನಿವೇಶದಲ್ಲಿ ನಿಷ್ಕಂಪತ್ವ ಕಂಡಾಗ ಶಬ್ದ ಪ್ರಯೋಗ ಪಾಕಗೊಂಡಿದೆ' ಎಂದ ಪೂರ್ವಾಚಾರರ ನಿರ್ಧಾರ.

ಪಾಕವೆಂದರೆ ಪರಿಣಾಮ; ಈ ಪರಿಣಾಮವನ್ನೇ ಮಂಗಳ ವ್ಯುತ್ಪತ್ತಿ ಎನ್ನುತ್ತಾ ಎಲ್ಲಿಯವರೆಗೆ ಮನಸ್ಸು ಡೋಲಾಯಮಾನವಾಗಿರುವುದೋ ಅಲ್ಲಿಯವರೆಗೆ ಮಾತ್ರ ಪದಗಳನ್ನು ಹಾಕುವ, ತೆಗೆಯುವ ಕಾರ್ಯ ನಡೆದಿರುತ್ತದೆ. ಒಮ್ಮೆ ಪದಪ್ರಯೋಗದಲ್ಲಿ ಸ್ಥಿರತ್ವ ಬಂತೆಂದರೆ ಅವನಿಗೆ ವಾಕ್ಸಿದ್ಧಿ ಆಯಿತೆನ್ನಬಹುದು ಎಂದರೆ ಯಾವಾಗ ಪದಗಳು ಪರಿವೃತ್ತಿ ಸಹಿಷ್ಣುತೆಯನ್ನು ಕಳೆದುಕೊಳ್ಳುವುವೋ ಆಗ ಅಲ್ಲಿ ಶಬ್ದಪಾಕವುಂಟೆಂದು ಶಬ್ದವೃತ್ತಿ ಬಲ್ಲವರು ಹೇಳುತ್ತಾರೆ. ವಾಮನನನು ಅನುಸರಿಸುವವರು ಹೇಳುವಂತೆ ಆಗ್ರಹದ ಮೂಲಕ ಪದ ಪ್ರಯೋಗ ಮಾಡಿಯೂ ಪದಸ್ಥೈಯವನ್ನು ಸಂಪಾದಿಸಬಹುದು. ಆದುದರಿಂದ ಪದಗಳಲ್ಲಿ ಪರಿವೃತ್ತಿಗೆ ಎಡೆಯಿಲ್ಲದಿರುವ ಪ್ರಯೋಗವೇ ಪಾಕ ಎನ್ನುತ್ತಾರೆ. ಈ ವಾದವನ್ನು ಅವಂತೀಸುಂದರಿ ಒಪ್ಪುವುದಿಲ್ಲ. 'ಪದಗಳು ಪರಿವೃತ್ತಿ ಸಹಿಷ್ಣುತೆಯನ್ನು ಕಳೆದುಕೊಳ್ಳುವುದನ್ನು ಪಾಕವೆಂದು ಒಪ್ಪಲಾಗದು - ಅದು ಕೇವಲ ಅಶಕ್ತಿ-ಏಕೆಂದರೆ ಒಂದೇ ವಿಷಯವನ್ನು ಕುರಿತ ಬೇರೆ ಬೇರೆ ಮಹಾಕವಿಗಳ ಬೇರೆ ಬೇರೆ ಶಬ್ದ ಪ್ರಯೋಗಗಳಲ್ಲಿಯೂ ಒಂದೇ ಬಗೆ ಪರಿಪಾಕ ಶಕ್ಯವಿದೆ. ಆದಕಾರಣ ಪಾಕಕ್ಕೆ ರಸೋಚಿತವಾದ ಶಬ್ದಾರ್ಥ ಸೂಕ್ತಿಗಳ ರಚನೆಯೇ ನಿಯಾಮಕ ಎಂಬುದು ಆಕೆಯ ವಾದ.

ವಾಕ್ಯಪಾಕ:- ಗುಣ, ಅಲಂಕಾರ, ರೀತಿ, ಉಕ್ತಿ, ಶಬ್ದಾರ್ಥಗಳ ರಚನಾಕ್ರಮ ಇವೆಲ್ಲವೂ ಬಲ್ಲವರಿಗೆ ಏತರ ಮೂಲಕ ರುಚಿಸುವುವೋ ಅದೇ ವಾಕ್ಯ ಪಾಕ. ರಾಜಶೇಖರ ಹೇಳುವಂತೆ 'ಪರಿಣಾಮದ ಮೇಲಿಂದ ಮಾತ್ರ ಊಹಿಸಲು ಶಕ್ಯವಿದ್ದು, ಅಂತಹ ಇಂತಹ ಎಂದು ಮೊದಲಾದ ಮಾತುಗಳಿಂದ ಮಾತ್ರ ನಿರ್ದೇಶಿಸಲು ಸಾಧ್ಯವೋ ಅದೇ ಪಾಕ. ಅದು ಸಹೃದಯರ ಅನುಭವ ಸಿದ್ಧ'. ಪ್ರಾಚೀನರ ಪಾಕಕಲ್ಪನೆ ಧ್ವನಿ ಸಿದ್ಧಾಂತಿಗಳ ಔಚಿತ್ಯ ಸಿದ್ಧಾಂತಕ್ಕೆ ಸಂವಾದಿಯಾಗಿದೆ.

**ಪಾಕದಲ್ಲಿ ಒಂಬತ್ತು ಬಗೆಗಳಿವೆ. ಅವುಗಳನ್ನು ಮತ್ತೆ ಮೂರು ಒಳಬಗೆಗಳಲ್ಲಿ ಇಡಲಾಗಿದೆ.(ಪಾಕ)**

1. ಪಿಚುಮಂದ.
2. ಬದರ.
3. ಮದ್ವೀಕಾ
4. ವಾರ್ತಾಕ.
5. ತಿಂತಿಣೀಕ.
6. ಕ್ರಮುಕ
7. ತ್ರಪುಸ.
8. ಸಹಕಾರ.
9. ನಾರಿಕೇಳ

**ರಾಜಶೇಖರನ ಪ್ರಕಾರ:-** ಈ ಒಂಬತ್ತು ಪಾಕಗಳಲ್ಲಿ ಸ್ವೀಕಾರ ಪಾಕಗಳು ಮೂರು. ಅವು ಮದ್ವಿಕಾ, ಸಹಕಾರ ಹಾಗೂ ನಾರಿಕೇಳ.

**ಸ್ವೀಕಾರ ಪಾಕಗಳುಲಕ್ಷಣಗಳು:** -ಮದ್ವಿಕಾ, ಸಹಕಾರ ಹಾಗೂ ನಾರಿಕೇಳ.

ಈ ಪಾಕಗಳು ಆದಿಯಲ್ಲಿ ಕ್ರಮವಾಗಿ ಕಹಿ, ಮಧ್ಯಮ ಹಾಗೂ ಸಿಹಿಯನ್ನು ಹೊಂದಿದ್ದರೂ ಅಂತ್ಯದಲ್ಲಿ ಸಿಹಿಯಾಗಿಯೇ ಇರುತ್ತವೆ. ಸ್ವಭಾವತಃ ಶುದ್ಧವಾದುದಕ್ಕೆ ಸಂಸ್ಕಾರದ ಅಗತ್ಯವೇ ಇಲ್ಲ. ಹೊಳೆಯುವ ಮುತ್ತಿಗೆ ಸಾಣೆಕೊಟ್ಟರೆ ಅದು ಹೆಚ್ಚಾಗಿ ಪ್ರಕಾಶಿಸುವುದಿಲ್ಲ.

ಸಂಸ್ಕಾರ ಯೋಗ್ಯವಾದ ಪಾಕಗಳು ಮೂರು:- ಅವು ಬದರ, ತಿಂತಿಣೀಕ ಹಾಗೂ ತ್ರಪುಸ-ಇವುಗಳು ಆದಿಯಲ್ಲಿ ಕ್ರಮವಾಗಿ ಕಹಿ, ಮಧ್ಯಮ, ಉತ್ತಮ ರುಚಿಗಳನ್ನು ಹೊಂದಿದ್ದರೂ ಅಂತ್ಯದಲ್ಲಿ ಮಧ್ಯಮ ರುಚಿಯನ್ನು ಪಡೆದಿವೆ. ಸಂಸ್ಕಾರ ಎಲ್ಲಕ್ಕೂ ಗುಣೋತ್ಕರ್ಷವನ್ನು ತಂದುಕೊಡುತ್ತದೆ. ಹನ್ನೆರಡಾಣೆ ಚಿನ್ನವಾದರೂ ಬೆಂಕಿಯ ಪರಿಣಾಮದಿಂದ ಶುದ್ಧ ಚಿನ್ನವಾಗುತ್ತದೆ.

**ವರ್ಜ್ಯಪಾಕಗಳು ಮೂರು:** ಪಿಚುಮಂದ, ವಾರ್ತಾಕ ಹಾಗೂ ಕ್ರಮುಕ. ಇವು ಆದಿಯಲ್ಲಿ ಕ್ರಮವಾಗಿ ಕಹಿ, ಮಧ್ಯಮ ಮತ್ತು ಉತ್ತಮವಾಗಿದ್ದರೂ ಅಂತ್ಯದಲ್ಲಿ ಕಹಿಯ ಆಗಿರುತ್ತವೆ. ಆದ್ದರಿಂದ ವರ್ಜ್ಯ.ಇದಿಷ್ಟು ವಾದ ರಾಜಶೇಖರನದು.

**ಪ್ರತಾಪರುದ್ರೀಯ:-** ಅರ್ಥಗಭೀರತೆಯನ್ನು ಪಾಕವೆಂದು ವರ್ಣಿಸುವ ಪ್ರತಾಪರುದ್ರೀಯ ಎರಡು ಪಾಕಗಳನ್ನು ಮಾತ್ರ ಒಪ್ಪುತ್ತದೆ. ಅವು ದ್ರಾಕ್ಷಾಪಾಕ ಮತ್ತು ನಾರಿಕೇಳಪಾಕ.

**ದ್ರಾಕ್ಷಾಪಾಕ:-** ಅರ್ಥ ಹಾಗೂ ಅದರ ಸ್ವಾರಸ್ಯ ಸುಲಭವಾಗಿ ತಿಳಿದರೆ ದ್ರಾಕ್ಷಾಪಾಕ. ದ್ರಾಕ್ಷಿಯನ್ನು ಬಾಯಿಗೆ ಹಾಕಿಕೊಂಡ ತಕ್ಷಣವೇ ರಸವನ್ನು ಗ್ರಹಿಸಬಹುದು. ಹಾಗೇ ಈ ಪಾಕವನ್ನು ಹೊಂದಿದ ರಚನೆ ಕೂಡ.

**ನಾರಿಕೇಳಪಾಕ:-** ತೆಂಗಿನಕಾಯಿ ಹಾಗಲ್ಲ. ಅದರ ಚಿಪ್ಪನ್ನು ಒಡೆದಲ್ಲದೆ ಅದರ ತಿರುಳು ಸಿಕ್ಕುವುದಿಲ್ಲ. ಸರಳವಾದ ಮತ್ತು ಗೂಢವಾದ ಅರ್ಥಗುಳುಳ್ಳ ಕಾವ್ಯಗಳೂ ಹಾಗೇ. ಆದ್ದರಿಂದ ಅದು ನಾರಿಕೇಳಪಾಕ.

**ಕದಲೀಪಾಕ:-** ಇವೆರಡಕ್ಕೂ, ಮಧ್ಯಬರುವಂತೆ ಕದಲೀಪಾಕ, ರಸಾಲಪಾಕಗಳನ್ನು ಹೇಳಬಹುದು.

**'ವ್ಯಂತ್ಮಾಕ ಪಾಕ':-** ಒಳಗೆ ರಸವಿಲ್ಲದೆ ಬರಿಯ ಶಾಸ್ತ್ರವ್ಯುತ್ಪತ್ತಿಯಿಂದ ಬರೆದ ಕಾವ್ಯದಲ್ಲಿ 'ವ್ಯಂತ್ಮಾಕ ಪಾಕ' ವಿರುತ್ತದೆ.

## References


1. ಭಾರತೀಯ ಕಾವ್ಯ ಮೀಮಾಂಸೆ- ತೀನಂಶ್ರೀ
2. ತೌಲನಿಕ ಕಾವ್ಯ ಮೀಮಾಂಸೆ-ಡಾ.ಎಚ್ ತಿಪ್ಪೇರುದ್ರಸ್ವಾಮಿ.
3. ಭಾರತೀಯ ಕಾವ್ಯ ಶಾಸ್ತ್ರ ಪರಿಭಾಷೆ- ಡಾ.ಮಲ್ಲೇಪುರಂ ಜಿ ವೆಂಕಟೇಶ.
4. ಕಾವ್ಯಾರ್ಥ ಪದಕೋಶ- ಡಾ.ಜಿ ಎಸ್ ಶಿವರುದ್ರಪ್ಪ
5. ವಿಮರ್ಶೆಯ ಪರಿಭಾಷೆ -ಡಾ.ಓ.ಎಲ್ ನಾಗಭೂಷಣ ಸ್ವಾಮಿ.